<u>ಪ್ರಧಾನ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ</u>

ಸಿ.ಸಿ. ನಂ.4735-2023
ಸಿ.ಡಬ್ಲ್ಯೂ -7 ಪಿ.ಡಬ್ಲ್ಯೂ -8

ಸಾಕ್ಷಿಯ ಹೆಸರು - ಸಂಗೀತಾ

ಗಂಡನ ಹೆಸರು - ಸುನೀಲ

ವಯಸ್ಸು - 44 ವರ್ಷ

ಉದ್ಯೋಗ - ಮನೆಗೆಲಸ

ವಾಸ - ಹುಮನಾಬಾದ.

ದಿನಾಂಕಃ 01-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ</u>

ಚಾಸಾ-1, 4 ರಿಂದ 6 & ಆರೋಪಿತನ ಪರಿಚಯ ಇರುತ್ತದೆ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಜಗಳ ನೋಡಿಲ್ಲ ಬಿಡಿಸಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ, ಆಲಿಸಿ ಅನುಮತಿಯನ್ನು ನೀಡಲಾಯಿತು.)**

<u>ಪಾಟೀ ಸವಾಲು : ಮಾನ್ಯ ಸ.ಸ.ಅ.ರವರಿಂದಃ</u>

ದಿನಾಂಖ 19-04-2023 ರಂದು ರಾತ್ರಿ 8-00 ಗಂಟೆ ಸುಮಾರಿಗೆ ನಾನು ಮತ್ತು ಚಾಸಾ-4 ರವರು ಇಂದಿರಾ ನಗರದ ಅಫೋಸಟಿಲ್ ಚರ್ಚ ಹತ್ತಿರ ನಿಂತಾದ ಚಾಸಾ-1 ರವರು ನಡೆದುಕೊಂಡು ಹೋಗುವಾಗ ಆರೋಪಿತನು ಚಾಸಾ-1 ರವರಿಗೆ ಮುಂದಕ್ಕೆ ಹೋಗದಂತೆ ಅಕ್ರಮವಾಗಿ ತಡೆದಿರುತ್ತಾನೆ ಎಂದರೆ ಸರಿಯಲ್ಲ ಆರೋಪಿತನು ಚಾಸಾ-1 ರವರಿಗೆ ನಿನ್ನ ಮಿತ್ರ ಕೊಡಬೇಕಾದ ರೂ.500/-ಗಳನ್ನು ನೀಡು ಕೊಡು ಸೂಳೆ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿಯಲ್ಲ. ನಂತರ ಆರೋಪಿತನು ಚಾಸಾ-1 ರವರಿಗೆ ನನಗೆ ಕೊಡುವ ಹಣ ಕೊಡು ಅಂದರೆ ಯಾವುದೇ ಹಣ ಕೊಡುವುದಿಲ್ಲ ಎಂದು ಅವಾಚ್ಯವಾಗಿ ಬೈದು, ಕೈಯಿಂದ ಚಾಸಾ-1 ರವರ ಹೊಟ್ಟೆಯಲ್ಲಿ, ಎದೆಯ ಮೇಲೆ ಹೊಡೆದು ಗುಪ್ತಗಾಯ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿತನು ಕಬ್ಬಿಣದ ಪಂಚನಿಂದ ಚಾಸಾ-1 ರವರ ಬಲ ತಲೆಯ ಹಿಂದೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿತನು ಚಾಸಾ-1 ರವರ ಜೊತೆ ಜೆಂಜಾಮುಷ್ಟಿ ಮಾಡುವಾಗ ನಾನು ಮತ್ತು ಚಾಸಾ-4 ರಿಂದ 6 ರವರು

ಜಗಳ ಬಿಡಿಸಿಕೊಳ್ಳುವಾಗ ಆರೋಪಿತನು ಚಾಸಾ-1 ರವರಿಗೆ ತನ್ನ ಹಣ ಕೊಡದೇ ಇದ್ದರೆ ನಿನಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ.

ಈ ರೀತಿ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆ ಭಾಗವನ್ನು ನಿಪಿ-10 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:ಶ್ರೀ. ಆರ್.ಜೆ.ಎನ್. ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲವೆಂದು ನಿವೇದಿಸಿಕೊಂಡಿರುತ್ತಾರೆ.</u>

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.